# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೊಡಗು ಜಿಲ್ಲೆ, ಮಡಿಕೇರಿ

ಉಪಸ್ಥಿತರು: ಡಾ॥ ರಿಚರ್ಡ್ ವಿನ್ಸೆಂಟ್ ಡಿಸೋಜಾ ಭಾ.ಆ.ಸೇ.,
ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ.

ನಂ:ಜಾತಿ/ಅಪೀಲು/01/2016-17 ದಿನಾಂಕ:28-11-2016

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ತಜಸ್ಸುಂ ಅರಾ,<br>ಕೋಂ. ಇಲಿಯಾಸ್ ಡಿ.ಎಲ್.<br>ಹಿಲ್ ರಸ್ತೆ, ಮಡಿಕೇರಿ. | 1. ಉಪ ವಿಭಾಗಾಧಿಕಾರಿ,<br>ಮಡಿಕೇರಿ ಉಪ ವಿಭಾಗ,<br>ಮಡಿಕೇರಿ.<br>2. ಶ್ರೀಮತಿ ಕಲಾವತಿ,<br>ಕೋಂ. ಪುರುಷೋತ್ತಮ,<br>ಚೌಡೇಶ್ವರಿ ದೇವಸ್ಥಾನದ ಹತ್ತಿರ,<br>ಮಹದೇವಪೇಟೆ,<br>ಮಡಿಕೇರಿ. |

---

**ಪ್ರಸ್ತಾವನೆ:**

ವಾದಿಗಳು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಹಾಗೂ ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ 1990 ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳು ಹಾಗೂ ತಿದ್ದುಪಡಿಗಳಂತೆ ಕಲಂ 4 ಎಫ್ ಪ್ರಕಾರ ರಿವಿಜನ್ ಅರ್ಜಿಯನ್ನು ಸಲ್ಲಿಸಿ 1ನೇ ಪ್ರತಿವಾದಿಗಳ ಆದೇಶ ಸಂ:ಜಾ.ದೃ.ಪ/ವಿ/01/2015-16, ದಿನಾಂಕ:01-03-2016ನ್ನು ಪ್ರಶ್ನಿಸಿರುತ್ತಾರೆ.

ಸದರಿ ರಿವಿಜನ್ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿ ಉಭಯಸ್ಥರಿಗೆ ನೋಟೀಸ್ ನೀಡಿ ವಾದ ಮಂಡನೆಗೆ ಸಾಕಷ್ಟು ಕಾಲಾವಕಾಶಕೊಟ್ಟು ಪ್ರಕರಣವನ್ನು ವಿಚಾರಣೆಗೊಳಪಡಿಸಲಾಯಿತು.

ವಾದಿ ಪರ ವಕೀಲರು ರಿವಿಜನ್ ಅರ್ಜಿಯಲ್ಲಿ ಹಾಗೂ ದಿನಾಂಕ:29-08-2016ರಂದು ಮಂಡಿಸಿದ ಮೌಖಿಕ ವಾದದಲ್ಲಿನ ಪ್ರಮುಖ ಅಂಶಗಳು ಈ ಕೆಳಗಿನಂತಿದೆ.

1) ಒಂದನೇ ಪ್ರತಿವಾದಿಗಳ ದಿನಾಂಕ:01-03-2016ರ ಆದೇಶದ ವಿರುದ್ಧ ಈ ರಿವಿಜನ್ ಅರ್ಜಿಯನ್ನು ಸಲ್ಲಿಸಿದ್ದು, ಪ್ರಶ್ನಿತ ಆದೇಶವು ನಿಯಮಗಳಿಗೆ ಸಾಕ್ಷ್ಯಾಧಾರಗಳಿಗೆ ಮತ್ತು ಪ್ರಕರಣದ ವಾಸ್ತವಾಂಶಗಳಿಗೆ ವಿರುದ್ಧವಾಗಿರುತ್ತದೆ.
2) ಒಂದನೇ ಪ್ರತಿವಾದಿಗಳು ಮೇಲ್ಮನವಿಯನ್ನು ಅಂಗೀಕರಿಸುವಂತಿಲ್ಲ ಮತ್ತು ವಾದಿಯವರಿಗೆ ನೀಡಲಾಗಿದ್ದ ಜಾತಿ ದೃಢೀಕರಣ ಪತ್ರವನ್ನು ರದ್ದುಗೊಳಿಸುವಂತಿಲ್ಲ. ಇದು ಕಾನೂನು ಸಮ್ಮತವಲ್ಲ.
3) 2ನೇ ಪ್ರತಿವಾದಿಗಳು ತಮ್ಮ ಮನವಿಯಲ್ಲಿನ ಅಂಶಗಳನ್ನು ಸಾಬೀತು ಪಡಿಸುವಂತಹ ಯಾವುದೇ ಕಾನೂನು ಬದ್ಧ ಸಾಕ್ಷ್ಯಾಧಾರಗಳನ್ನು ಅಥವಾ ದಾಖಲೆಗಳನ್ನು ನೀಡದೇ ಇರುವುದರಿಂದ ಒಂದನೇ ಪ್ರತಿವಾದಿಗಳು ಸದರಿಯವರು ಸಲ್ಲಿಸಿದ ಮೇಲ್ಮನವಿಯನ್ನು ತಿರಸ್ಕರಿಸಬೇಕಾಗಿತ್ತು.

ಸಾಬೀತುಪಡಿಸಲಾಗದ ಯಾವುದೇ ಸಾಕ್ಷ್ಯಾಧಾರಗಳು ಮೌಲ್ಯ ರಹಿತವಾದುದಾಗಿದ್ದು, ಎರಡನೇ ಪ್ರತಿವಾದಿಗಳು ಇದರ ಲಾಭವನ್ನು ಪಡೆಯಲು ಅರ್ಹತೆ ಹೊಂದುವುದಿಲ್ಲ.

4) ವಾದಿಯವರು ಅಕ್ಟೋಬರ್ 1998ರಲ್ಲಿ ಮುಸ್ಲಿಂ ಕಾನೂನಿನಂತೆ ಇಲಿಯಾಸ್ ಡಿ.ಎಲ್. ಎಂಬುವವರನ್ನು ವಿವಾಹವಾಗಿದ್ದು, ಇದನ್ನು ದಿನಾಂಕ:19-12-1998ರಂದು ವಿಶೇಷ ವಿವಾಹ ಕಾಯ್ದೆಯಡಿ ನೋಂದಾಯಿಸಲಾಗಿದೆ. ವಿವಾಹ ನಂತರ ಇಸ್ಲಾಂ ಧರ್ಮಕ್ಕೆ ಸೇರಿದ್ದು, ಎಂ.ಎನ್. ಕವಿತ ಎಂಬ ತನ್ನ ಹೆಸರನ್ನು ತಜಸ್ಸುಂ ಅರಾ ಎಂಬುದಾಗಿ ಬದಲಾಯಿಸಿಕೊಂಡಿದ್ದು, ಈ ಬಗ್ಗೆ ದಿನಾಂಕ:07-07-1999ರಂದು ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ವಿವಾಹನಂತರ ಇಸ್ಲಾಂ ಧರ್ಮವನ್ನು ಅನುಸರಿಸುತ್ತಿರುವುದರಿಂದ ಹಿಂದು ಎಂಬುದು ಕೊನೆಗೊಂಡಿರುತ್ತದೆ. ಅದರಂತೆ ಇದೆಲ್ಲವನ್ನು ಪರಿಗಣಿಸಿ ತಹಶೀಲ್ದಾರ್, ಮಡಿಕೇರಿ ತಾಲ್ಲೂಕು ರವರು ಮುಸ್ಲಿಂ ಜಾತಿಗೆ ಸೇರಿರುವುದಾಗಿ ಜಾತಿ ದೃಢೀಕರಣ ಪತ್ರ ನೀಡಿರುತ್ತಾರೆ. ಮುಸ್ಲಿಂ ಜಾತಿಗೆ ಸೇರಿದ ನಂತರ ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿ ಮತ್ತಿತರ ದಾಖಲೆಗಳನ್ನು ಇವರ ಹೊಸ ಹೆಸರಿನಲ್ಲಿ ನೀಡಲಾಗಿದ್ದು, ಜಾತಿಯನ್ನು ಮುಸ್ಲಿಂ ಎಂಬುದಾಗಿ ಕಾಣಿಸಲಾಗಿದೆ.

5) ಚುನಾವಣೆ ನಾಮಪತ್ರ ಪರಿಶೀಲನೆ ಸಂದರ್ಭದಲ್ಲಿ ವಾದಿಯವರ ಜಾತಿಯ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಎರಡನೇ ಪ್ರತಿವಾದಿಗಳಿಗೆ ಅವಕಾಶವಿದ್ದುದನ್ನು ಮತ್ತು ಈಗ ಆಕ್ಷೇಪಣೆ ವ್ಯಕ್ತಪಡಿಸುತ್ತಿರುವ ಅಂಶವನ್ನು ಒಂದನೇ ಪ್ರತಿವಾದಿಗಳು ಗಮನಿಸಬೇಕಾಗಿತ್ತು.

6) ಎರಡನೇ ಪ್ರತಿವಾದಿಗಳು ತಹಶೀಲ್ದಾರ್, ಮಡಿಕೇರಿ ತಾಲ್ಲೂಕು ಇವರಿಗೆ ಸಲ್ಲಿಸಿದ್ದ ಆಕ್ಷೇಪಣೆಯಲ್ಲಿ ಮಾಡಿರುವ ಆರೋಪಗಳು ಸಾಬೀತಾಗದೇ ಇರುವ ಹಿನ್ನೆಲೆಯಲ್ಲಿ ಒಂದನೇ ಪ್ರತಿವಾದಿಗಳು ಸದರಿಯವರ ಮನವಿಯನ್ನು ಪರಿಗಣಿಸದೇ ಸಾರಾ ಸಗಟಾಗಿ ತಿರಸ್ಕರಿಸಬೇಕಾಗಿತ್ತು. ವಾದಿಯವರು ದಿನಾಂಕ:14-01-2016ರಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ತಪ್ಪಾಗಿ ಅರ್ಥೈಸಿಕೊಂಡು ಒಂದನೇ ಪ್ರತಿವಾದಿಗಳು ತಪ್ಪು ನಿರ್ಧಾರಕ್ಕೆ ಬಂದಿರುತ್ತಾರೆ.

7) ಹಿಂದೂ ಧರ್ಮಕ್ಕೆ ಸೇರಿದ ಯಾವುದೇ ವ್ಯಕ್ತಿ ಬೇರೆ ಧರ್ಮಕ್ಕೆ ಮತಾಂತರಗೊಂಡ ನಂತರ ಅವರು ಹಿಂದುವಾಗಿ ಮುಂದುವರೆಯುವುದಿಲ್ಲ. ಅದರಂತೆ ವಾದಿಯವರು ಇಸ್ಲಾಂ ಧರ್ಮಕ್ಕೆ ಪರಿವರ್ತನೆಗೊಂಡಂತೆ ಸದರಿಯವರು ಮುಸ್ಲಿಂ ಜಾತಿಗೆ ಸೇರಿದವರೆಂದು ತಹಶೀಲ್ದಾರರು ಜಾತಿ ದೃಢೀಕರಣ ಪತ್ರ ನೀಡಿರುವುದು ಸರಿಯಾಗಿರುತ್ತದೆ.

8) ಮಡಿವಾಳ ಅಥವಾ ಮುಸ್ಲಿಂ ಎರಡು ಜಾತಿಗಳೂ ಬಿ.ಸಿ.ಎಂ. 'ಎ' ಗೆ ಸೇರಿದ ಮೀಸಲಾತಿ ವರ್ಗಕ್ಕೆ ಸಂಬಂಧಿಸಿದ ಜಾತಿಗಳಾಗಿರುತ್ತವೆ.

9) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಹಾಗೂ ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮದ ಸೆಕ್ಷನ್ 4ಸಿ ಮತ್ತು 4ಡಿ ಪ್ರಕಾರ) ಜಾತಿ ಪರಿಶೀಲನೆ ಮತ್ತು ಮೇಲ್ಮನವಿ ತೆಗೆದುಕೊಳ್ಳಲು ಅಧಿಕಾರ ವ್ಯಾಪ್ತಿ ಇರುವುದಿಲ್ಲ.

ಆದುದರಿಂದ ಮೇಲ್ಕಂಡ ಕಾರಣಗಳಿಂದ ರಿವಿಜನ್ ಅರ್ಜಿಯನ್ನು ಪುರಸ್ಕರಿಸಿ 1ನೇ ಪ್ರತಿವಾದಿಗಳ ಪ್ರಶ್ನಿತ ಆದೇಶವನ್ನು ಬದಿಗೊತ್ತಿ ಆದೇಶಿಸಬೇಕೆಂದು ಕೋರಲಾಗಿದೆ.

ಎರಡನೇ ಪ್ರತಿವಾದಿ ಪರ ವಕೀಲರು ದಿನಾಂಕ:29-08-2016ರಂದು ಮಂಡಿಸಿದ ಮೌಖಿಕ ವಾದದಲ್ಲಿನ ಪ್ರಮುಖ ಅಂಶಗಳು ಕೆಳಕಂಡಂತಿದೆ.

1) ವಾದಿಯವರು ತಾನು ಬಿ.ಸಿ.ಎಂ. 'ಎ' ಮುಸ್ಲಿಂ ಜಾತಿಗೆ ಸೇರಿದವರೆಂದು ಜಾತಿ ದೃಢೀಕರಣ ಪತ್ರ ಕೋರಿ ತಹಶೀಲ್ದಾರ್, ಮಡಿಕೇರಿ ತಾಲ್ಲೂಕು ಇವರಿಗೆ ಅರ್ಜಿ ಸಲ್ಲಿಸಲಾಗಿ, ತಹಶೀಲ್ದಾರರು ನೈಜಾಂಶವನ್ನು ಪರಿಶೀಲಿಸದೇ ಸುಳ್ಳು ಜಾತಿ ದೃಢೀಕರಣವನ್ನು ವಿತರಿಸಿರುತ್ತಾರೆ. ಜಾತಿ ದೃಢೀಕರಣ ಪತ್ರವನ್ನು ಪಡೆಯಲು ವಾದಿಯವರು ಸುಳ್ಳು ಪ್ರಮಾಣ ಪತ್ರ ಮತ್ತು ಅರ್ಜಿ ಸಲ್ಲಿಸಿರುತ್ತಾರೆ.

2) ವಾದಿಯವರು ಬಿ.ಸಿ.ಎಂ. 'ಎ' ಮುಸ್ಲಿಂ ಜಾತಿಗೆ ಸೇರಿದವರಲ್ಲ. ಸದರಿಯವರು ಮಡಿಕೇರಿಯ ಸಂತ ಜೋಸೆಫರ ಕಾನ್ವೆಂಟ್‌ನಲ್ಲಿ ವಿದ್ಯಾಭ್ಯಾಸ ಮಾಡಿದ್ದು, ಸಂತ ಜೋಸೆಫರ ಶಾಲೆ, ಜೂನಿಯರ್ ಕಾಲೇಜು ಮಡಿಕೇರಿ ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮಡಿಕೇರಿ ಮತ್ತು ಸದರಿ ಕಾಲೇಜಿನ ವರ್ಗಾವಣೆ ಪ್ರಮಾಣ ಪತ್ರಗಳ ಪ್ರಕಾರ ವಾದಿಯವರ ಹೆಸರು ಎಂ.ಎನ್. ಕವಿತ ಎಂದೂ ಇವರು ಹಿಂದೂ ಧರ್ಮದ ಗೌಡ ಜನಾಂಗಕ್ಕೆ ಸೇರಿರುವುದು ದೃಢಪಡುತ್ತದೆ.
3) ವಾದಿಯವರು ರಿಜಿಸ್ಟರ್ಡ್ ಮದುವೆಯಾಗಿದ್ದು, ಮದುವೆ ಪ್ರಮಾಣ ಪತ್ರದಲ್ಲಿ ಅವರ ಹೆಸರನ್ನು ಎಂ.ಎನ್. ಕವಿತ ಎಂಬುದಾಗಿ ನೀಡಿದ್ದು, ಇದು ಮೇಲ್ಕಂಡ ಶಾಲೆ ಮತ್ತು ಕಾಲೇಜುಗಳ ದಾಖಲಾತಿಗಳಿಗೆ ತಾಳೆ ಹೊಂದುತ್ತವೆ. ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ವಾದಿಯವರು ಹಿಂದು ಧರ್ಮದ ಗೌಡ ಜನಾಂಗಕ್ಕೆ ಸೇರಿದವರಾಗಿದ್ದು, ಬಿ.ಸಿ.ಎಂ. 'ಎ' ಮುಸ್ಲಿಂ ಜಾತಿಗೆ ಸೇರಿದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ.
4) ವಾದಿಯವರು ನಗರಸಭೆ ಚುನಾವಣೆಗೆ ಸ್ಪರ್ಧಿಸಲು ಸಲ್ಲಿಸಿರುವ ನಾಮಪತ್ರ ಮತ್ತು ಇತರೆ ದಾಖಲಾತಿಗಳಲ್ಲಿ ತಾನು ಬಿ.ಸಿ.ಎಂ. 'ಎ' ಮುಸ್ಲಿಂ ಜಾತಿಗೆ ಸೇರಿದವರೆಂದು ನಮೂದಿಸಿರುತ್ತಾರೆ. ಇದು ಸುಳ್ಳು, ಮುಸ್ಲಿಂ ಜಾತಿಯವರನ್ನು ವಿವಾಹವಾಗುವುದರಿಂದ ಮೂಲ ಜಾತಿ ಬದಲಾಗುವುದಿಲ್ಲ. ವಾದಿಯವರು ಹಿಂದು ಧರ್ಮದ ಗೌಡ ಜಾತಿಯಲ್ಲಿಯೇ ಮುಂದುವರಿಯುತ್ತಾರೆ. ವಾದಿಯವರು ಸುಳ್ಳು ಮಾಹಿತಿ ನೀಡಿ ಬಿ.ಸಿ.ಎಂ. 'ಎ' ಮುಸ್ಲಿಂ ಎಂದು ಸುಳ್ಳು ಜಾತಿ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತಾರೆ.
5) ತಹಶೀಲ್ದಾರರು ಸರಿಯಾಗಿ ಪರಿಶೀಲನೆ ಮಾಡದೇ ವಾದಿಯವರಿಗೆ ಜಾತಿ ದೃಢೀಕರಣ ಪತ್ರವನ್ನು ವಿತರಿಸಿದ್ದು, ತಹಶೀಲ್ದಾರರು ಅದನ್ನು ದಿನಾಂಕ:17-01-2015ರ ಆದೇಶದಂತೆ ರದ್ದುಪಡಿಸಿರುತ್ತಾರೆ. ತಹಶೀಲ್ದಾರರು ಜಾತಿ ದೃಢೀಕರಣ ಪತ್ರ ನೀಡುವ ಮಂಜೂರಾತಿ ಪ್ರಾಧಿಕಾರವಾಗಿದ್ದು, ತಾನೇ ಅದನ್ನು ರದ್ದುಪಡಿಸಿರುವ ಆದೇಶದ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯವು ಮಧ್ಯ ಪ್ರವೇಶಿಸಿ ಸೂಕ್ತ ಪರಿಹಾರಕ್ಕಾಗಿ ಈ ನ್ಯಾಯಾಲಯವನ್ನು ಸಂಪರ್ಕಿಸುವಂತೆ ವಾದಿಯವರಿಗೆ ನಿರ್ದೇಶನ ನೀಡಿರುತ್ತದೆ.
6) ಮಾನ್ಯ ದೆಹಲಿ ಉಚ್ಚ ನ್ಯಾಯಾಲಯದ ತೀರ್ಪನ್ನು ಅನುಸರಿಸಿ CDJ 2010 DHC 1616 ರಲ್ಲಿ ವರದಿಯಾಗಿರುವಂತೆ It is been held that it is well known principle of civil law that a person born into or following one religion continues to belong to such relief subject to converson to another religion ಎಂಬುದನ್ನು ಎತ್ತಿ ಹಿಡಿಯಲಾಗಿರುತ್ತದೆ.
7) ಆದುದರಿಂದ ವಾದಿಯವರು ಬಿ.ಸಿ.ಎಂ. 'ಎ' ಮುಸ್ಲಿಂ ಜಾತಿಗೆ ಸೇರಿದವರಾಗಿರದೇ ಹಿಂದೂ ಧರ್ಮದ ಗೌಡ ಜಾತಿಗೆ ಸೇರಿದವರೆಂಬುದನ್ನು ಎತ್ತಿ ಹಿಡಿದು, ಒಂದನೇ ಪ್ರತಿವಾದಿಗಳ ಪ್ರಶ್ನಿತ ಆದೇಶವು ಸೂಕ್ತವಾಗಿರುವುದಾಗಿ ಪರಿಗಣಿಸಿ ರಿವಿಜನ್ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಲಾಗಿದೆ.

ಉಭಯಸ್ಥರ ವಾದ, ಪ್ರತಿವಾದ, ಹಾಜರುಪಡಿಸಿದ ದಾಖಲೆಗಳು ಮತ್ತು ಕೆಳ ನ್ಯಾಯಾಲಯದ ಕಡತಗಳನ್ನು ಪರಿಶೀಲಿಸಲಾಯಿತು. ಈ ಪ್ರಕರಣದಲ್ಲಿ ವಾದಿಯವರಿಗೆ ತಹಶೀಲ್ದಾರ್, ಮಡಿಕೇರಿ ತಾಲ್ಲೂಕು ಇವರು ದಿನಾಂಕ:05-12-2013ರಂದು ಇವರು ಹಿಂದುಳಿದ ವರ್ಗದ 'ಅ' (ಬಿಸಿಎಂ 'ಎ') ಮೀಸಲಾತಿಯಡಿ ಬರುವ 'ಮುಸ್ಲಿಂ' ಜಾತಿಗೆ ಸೇರಿದವರೆಂದು ಜಾತಿ ದೃಢೀಕರಣ ಪತ್ರ ನೀಡಿರುತ್ತಾರೆ.

ಈ ಸಂಬಂಧ ಎರಡನೇ ಪ್ರತಿವಾದಿಯವರು ತಹಶೀಲ್ದಾರರಿಗೆ ದೂರು ನೀಡಿ ವಾದಿಯವರು ಸುಳ್ಳು ದಾಖಲೆಗಳನ್ನು ನೀಡಿ ಜಾತಿ ದೃಢೀಕರಣ ಪತ್ರ ಪಡೆದಿರುವುದಾಗಿ ಸದರಿ ಜಾತಿ ದೃಢೀಕರಣ ಪತ್ರವನ್ನು ವಜಾಗೊಳಿಸಲು ಕೋರಿದ ಮೇರೆ ತಹಶೀಲ್ದಾರರು ಈ ಬಗ್ಗೆ ವಿಚಾರಣೆ ನಡೆಸಿ ದಾಖಲೆಗಳನ್ನು ಪರಿಶೀಲಿಸಿ

ವಾದಿಯವರಿಗೆ ನೀಡಲಾಗಿದ್ದ ಜಾತಿ ದೃಢೀಕರಣ ಪತ್ರವನ್ನು ದಿನಾಂಕ:17-01-2015ರಂದು ವಜಾಗೊಳಿಸಿ ಆದೇಶಿಸಿರುತ್ತಾರೆ.

ವಾದಿಯವರು ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂ:4037/2015ರಂತೆ ರಿಟ್ ಅರ್ಜಿಯನ್ನು ಸಲ್ಲಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:07-07-2015ರ ಆದೇಶದಲ್ಲಿ ತಹಶಿಲ್ದಾರರು ತಾನೇ ನೀಡಿರುವ ಜಾತಿ ದೃಢೀಕರಣವನ್ನು ರದ್ದುಪಡಿಸಲು ಅವಕಾಶವಿರುವದಿಲ್ಲವೆಂದು ಅಭಿಪ್ರಾಯಪಟ್ಟು ವಾದಿಯವರಿಗೆ ಸೂಕ್ತ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಲು ನಿರ್ದೇಶಿಸಿದ ಮೇರೆ ವಾದಿಯವರು ಒಂದನೇ ಪ್ರತಿವಾದಿಗಳಿಗೆ ಮೇಲ್ಮನವಿ ಸಲ್ಲಿಸಿರುತ್ತಾರೆ.

ಒಂದನೇ ಪ್ರತಿವಾದಿಗಳು ಈ ಬಗ್ಗೆ ವಿಚಾರಣೆ ನಡೆಸಿ ವಾದಿಯವರಿಗೆ ತಹಶೀಲ್ದಾರ್, ಮಡಿಕೇರಿ ತಾಲ್ಲೂಕು ಇವರು ದಿನಾಂಕ:05-12-2013ರಂದು ನೀಡಿರುವ ಜಾತಿ ದೃಢೀಕರಣವನ್ನು ರದ್ದುಗೊಳಿಸಿ ಪ್ರಶ್ನಿತ ಆದೇಶ ಹೊರಡಿಸಿರುತ್ತಾರೆ.

ಒಂದನೇ ಪ್ರತಿವಾದಿಗಳ ಸದರಿ ಆದೇಶವನ್ನು ಪ್ರಶ್ನಿಸಿ ವಾದಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂ:12559/2016ರಂತೆ ರಿಟ್ ಅರ್ಜಿಯನ್ನು ಸಲ್ಲಿಸಲಾಗಿ, ಮಾನ್ಯ ಉಚ್ಚ ನ್ಯಾಯಾಲಯವು ಉಪ ವಿಭಾಗಾಧಿಕಾರಿಯವರು ಮೇಲ್ಕಂಡ ಕಾಯ್ದೆಯ ಕಲಂ 4(ಬಿ)ರಡಿ ಹೊರಡಿಸಿದ ಆದೇಶದ ವಿರುದ್ಧ ಜಿಲ್ಲಾಧಿಕಾರಿಗಳಿಗೆ ಕಲಂ 4(ಎಫ್) ರಡಿ ರಿವಿಜನ್ ಅರ್ಜಿ ಸಲ್ಲಿಸಲು ಆದೇಶಿಸಿದಂತೆ ವಾದಿಯವರು ಈ ರಿವಿಜನ್ ಅರ್ಜಿ ಸಲ್ಲಿಸಿರುತ್ತಾರೆ.

ಪ್ರಕರಣದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಲಾಗಿ, ವಾದಿಯವರು ವ್ಯಾಸಂಗ ಮಾಡಿದ್ದ ಸಂತ ಜೋಸೆಫರ ಕಾನ್ವೆಂಟ್ ಮಡಿಕೇರಿ ಇಲ್ಲಿ ಇವರ ಜಾತಿಯನ್ನು ಗೌಡ ಎಂಬುದಾಗಿ ನಮೂದಿಸಿರುವುದು, ಸರ್ಕಾರಿ ಪದವಿ ಪೂರ್ವ ಕಾಲೇಜು ಮಡಿಕೇರಿ ಇಲ್ಲಿಂದ ಪಡೆದ ದಾಖಲೆಯಂತೆ ಇವರ ಜಾತಿಯನ್ನು ಹಿಂದು ಕೂರ್ಗಿ ಎಂದು ನಮೂದಿಸಿರುವುದನ್ನು ಮತ್ತು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮಡಿಕೇರಿ ಇವರು ನಿರ್ವಹಿಸಿರುವ ದಾಖಲೆಗಳಂತೆ ಇವರ ಜಾತಿ ಕೊಡವ ಎಂಬುದಾಗಿ ನಮೂದಿಸಿರುವುದನ್ನು ಗಮನಿಸಲಾಗಿದೆ. ಈ ರೀತಿ ವಾದಿಯವರ ಜಾತಿಯ ಬಗ್ಗೆ ವಿವಿಧ ದಾಖಲೆಗಳಲ್ಲಿ ನಮೂದಿಸಿರುವ ನಮೂದುಗಳು ಭಿನ್ನವಾಗಿರುತ್ತವೆ. ಪ್ರಸ್ತುತ ವಾದಿಯವರು ಮುಸ್ಲಿಂ ಕಾನೂನಿನಂತೆ ಇಲ್ಯಾಸ್ ಡಿ.ಎಲ್. ಎಂಬುವವರನ್ನು ವಿವಾಹವಾಗಿ ಇಸ್ಲಾಂ ಧರ್ಮಕ್ಕೆ ಸೇರಿ ತಮ್ಮ ಹೆಸರನ್ನು ಎಂ.ಎನ್. ಕವಿತ ಎಂಬುದನ್ನು ತಬಸ್ಸುಂ ಅರಾ ಎಂಬುದಾಗಿ ಬದಲಾಯಿಸಿಕೊಂಡಿದ್ದು, ಮುಸ್ಲಿಂ ಜಾತಿಗೆ ಸೇರಿರುವ ಬಗ್ಗೆ ಜಾತಿ ದೃಢೀಕರಣ ಪತ್ರ ಪಡೆದಿರುತ್ತಾರೆ. ಮುಸ್ಲಿಂ ಜಾತಿಗೆ ಸೇರಿದ ನಂತರ ಪಡಿತರ ಚೀಟಿ ಮತದಾರರ ಗುರುತಿನ ಚೀಟಿ ಮತ್ತಿತರ ದಾಖಲೆಗಳನ್ನು ಹೊಸ ಹೆಸರಿನಲ್ಲಿ ನೀಡಲಾಗಿದ್ದು, ಜಾತಿಯನ್ನು ಮುಸ್ಲಿಂ ಎಂಬುದಾಗಿ ಕಾಣಿಸಿರುವುದನ್ನು ಗಮನಿಸಲಾಗಿದೆ. ಚುನಾವಣೆ ನಾಮಪತ್ರ ಪರಿಶೀಲನೆ ಸಂದರ್ಭದಲ್ಲಿ ವಾದಿಯವರ ಜಾತಿಯ ಬಗ್ಗೆ ಎರಡನೇ ಪ್ರತಿವಾದಿಗಳು ಆಕ್ಷೇಪಣೆ ಸಲ್ಲಿಸದಿರುವುದನ್ನು ಗಮನಿಸಲಾಗಿದೆ. ವಾದಿಯವರ ಜಾತಿ ವಿಚಾರಣೆಗೆ ಸಂಬಂಧಿಸಿದಂತೆ ಚುನಾವಣೆಯ ವೇಳೆ ತಪ್ಪು ಮಾಹಿತಿ ನೀಡಿದ ವಿಚಾರದ ಬಗ್ಗೆ ಎರಡನೇ ಪ್ರತಿವಾದಿಗಳು ಮಡಿಕೇರಿ ಪ್ರಿನ್ಸಿಪಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಾಖಲಿಸಿರುವ ದೂರು ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವುದು ಕಂಡು ಬರುತ್ತದೆ. ಕೆಳ ನ್ಯಾಯಾಲಯದಲ್ಲಿ ಜಾತಿ ಪ್ರಮಾಣ ಪತ್ರವನ್ನು ರದ್ದುಗೊಳಿಸಿದ ಬಗ್ಗೆ ನೀಡಿದ ಆರೋಪಕ್ಕೆ ಯಾವುದೇ ಸಮರ್ಥನೆ ನೀಡಿಲ್ಲವೆಂದೂ ಮತ್ತು ವಾದಿಯವರು ಮುಸ್ಲಿಂ ಜಾತಿಗೆ ಸೇರಿದವರೆಂಬ ಅಂಶವನ್ನು ಪುಷ್ಟೀಕರಿಸುವಲ್ಲಿ ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಮತ್ತು ವಾದ ಮಂಡಿಸಲು ಕೆಳ ನ್ಯಾಯಾಲಯದಲ್ಲಿ ಅವಕಾಶ ನೀಡಿರುವುದಿಲ್ಲವೆಂದು ವಾದಿಗಳ ಪರ ವಕೀಲರು ಮೌಖಿಕ ವಾದ ಮಂಡನೆ ಸಂದರ್ಭದಲ್ಲಿ ವಾದಿಸಿರುತ್ತಾರೆ. ಉಭಯಸ್ಥರ ವಾದಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಉಭಯಸ್ಥರಿಗೂ ಸಾಕಷ್ಟು ಕಾಲಾವಕಾಶ ನೀಡಿ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಮರ್ಥನೆಯೊಂದಿಗೆ ಆದೇಶ ಹೊರಡಿಸುವಲ್ಲಿ

ಮರು ವಿಚಾರಣೆ ನಡೆಸುವ ಅವಶ್ಯಕತೆ ಇರುವುದಾಗಿ ಕಂಡು ಬರುತ್ತಿದ್ದು, ಈ ಹಿನ್ನೆಲೆಯಲ್ಲಿ ಪ್ರಕರಣದ ಬಗ್ಗೆ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪ್ರಕರಣದಲ್ಲಿ ಉಭಯಸ್ಥರಿಗೆ ತಮ್ಮ ವಾದವನ್ನು ಮಂಡಿಸಲು ಸಾಕಷ್ಟು ಅವಕಾಶ ನೀಡಿ ಮರು ವಿಚಾರಣೆ ನಡೆಸಿ ಸೂಕ್ತ ಆದೇಶ ಹೊರಡಿಸುವಂತೆ ಪ್ರಕರಣವನ್ನು ಮರು ವಿಚಾರಣೆಗಾಗಿ ಒಂದನೇ ಪ್ರತಿವಾದಿಗಳಿಗೆ ಹಿಂದಿರುಗಿಸಿ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:28-11-2016 ರಂದು ಘೋಷಿಸಿದೆ.

ಜಿಲ್ಲಾಧಿಕಾರಿ,<br>
ಕೊಡಗು ಜಿಲ್ಲೆ, ಮಡಿಕೇರಿ.